ಕರ್ನಾಟಕ ವಿಧಾನಸಭೆ

ಮಂಗಳವಾರ 9ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-30 ಗಂಟೆಗೆ ಸಮಾವೇಶಗೊಂಡಿತು.

(ಎಸ್. ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು:

ವಿಧಾನಸಭಾ ಮಾಜಿ ಸದಸ್ಯರುಗಳಾದ ಶ್ರೀ ಬಾಪುರಾವ್ ಹುಲ್ಲೂರ್‌ಕರ್, ಶ್ರೀ ಡಿ.ಜಿ. ಬಸವಗೌಡ, ಶ್ರೀ ಅಣ್ಣಾರಾವ್ ವೀರಭದ್ರಪ್ಪ ಪಾಟೀಲ್, ಶ್ರೀ ಬಿ. ಪುಟ್ಟಸ್ವಾಮಯ್ಯ, ಶ್ರೀ ಎಂ. ವೀರಭದ್ರಪ್ಪ, ಶ್ರೀ ಕಲ್ಯಾಣ ರಾವ್ ಎಂ. ಮರಗುತ್ತಿ, ಶ್ರೀ ಎನ್. ತಮ್ಮಣ್ಣ, ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ವೈ.ಎನ್. ನಂಜುಂಡಪ್ಪ, ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಎನ್. ಸಿ. ಮಾಧುರಾಜು ಇವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಶ್ರೀ ಬಾಪೂರಾವ್ ಹಲ್ಲೂರ್‌ಕರ್

ಶ್ರೀ ಬಾಪೂರಾವ್ ಹುಲ್ಲೂರ್‌ಕರ್‌ಯವರು ದಿನಾಂಕ 7ನೇ ಮೇ 1938ರಲ್ಲಿ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಹುಲಸೂರಿನಲ್ಲಿ ಜನಿಸಿದರು. ಕಾನೂನು ಪದವಿ ಪಡೆದ ನಂತರ ವಕೀಲ ವೃತ್ತಿಯನ್ನು ಆರಂಭಿಸಿದರು. ಇವರು ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರದಿಂದ ಮೂರು ಸಲ 1962 ರಿಂದ 1967, 1972 ರಿಂದ 1977 ಹಾಗೂ 1978ರಿಂದ 1983 ಅಯ್ಕೆಯಾಗಿ ಜನಸೇವೆ ಮಾಡಿದ್ದರು.

ಶ್ರೀಯುತರು ವಿಧಾನ ಸಭಾ ಉಪಾಧ್ಯಕ್ಷರಾಗಿ ಹಾಗೂ 1978 ರಲ್ಲಿ ಶ್ರೀ ದೇವರಾಜು ಅರಸು ಮಂತ್ರಿಮಂಡಲದಲ್ಲಿ ಪೌರಾಡಳಿತ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಸರಳ ಪ್ರಾಮಾಣಿಕ ಹಾಗೂ ಸಜ್ಜನಿಕೆಯ ವ್ಯಕ್ತಿತ್ವದವರಾಗಿದ್ದ ಸದರಿಯವರು ದಿನಾಂಕ 4ನೇ ಡಿಸೆಂಬರ್ 1998 ರಂದು ತಮ್ಮ ಜನ್ಮ ಸ್ಥಳವಾದ ಹುಲಸೂರಿನಲ್ಲಿ ನಿಧನರಾಗಿರುತ್ತಾರೆ.

2. ಶ್ರೀ ಡಿ.ಬಿ. ಬಸವನಗೌಡ

ಶ್ರೀ ಡಿ.ಬಿ. ಬಸವನಗೌಡರು ದಿನಾಂಕ 18-12-35 ರಂದು ಬೆನಕನಹಳ್ಳಿ ಗ್ರಾಮದಲ್ಲಿ ಜನಿಸಿದರು. ಶ್ರೀಯುತರು ವೃತ್ತಿಯಲ್ಲಿ ಕೃಷಿಕರು ಹಾಗೂ ಜನತಾ ದಳದ ಹಿರಿಯ ಮುಖಂಡರೂ ಆಗಿದ್ದರು. ಅವರು ವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಪಡೀದು, ಆರಂಭದಲ್ಲಿ ಬೆನಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಹೊನ್ನಾಳಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನಂತರದ ದಿನಗಳಲ್ಲಿ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾಗಿ ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿ ಹಾಗೂ ದಾವಣಗೆರೆ ಸಕ್ಕರೆ ಕಂಪನಿಯ ನಿರ್ದೇಶಕರಾಗಿಯೂ ಶ್ರೀ ಬಸವನಗೌಡರು ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ವಿಧಾನ ಸಭಾ ಕ್ಷೇತ್ರದಿಂದ ಎರಡು ಬಾರಿ ಅಂದರೆ 1983 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಹಾಗೂ 1985 ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾಗಿ ಕ್ಷೇತ್ರಕ್ಕೆ ಸಾಕಷ್ಟು ದುಡಿದಿದ್ದರು.

ಶಿವಮೊಗ್ಗ ಜಿಲ್ಲಾ ಜನತಾ ದಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಶಿವಮೋಗ್ಗ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸ್ಪರ್ಧಿಸಿದ್ದರು.

ಶ್ರೀ ಡಿ.ಬಿ. ಬಸವನಗೌಡರು ತಮ್ಮ ಜೀವನವನ್ನು ಆರಂಭದಿಂದಲೂ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟವರು. ಶ್ರೀಯುತರು ದಿನಾಂಕ 12ನೇ ನವೆಂಬರ್ 1998 ರಂದು ನಿಧನ ಹೊಂದಿರುತ್ತಾರೆ.

3. ಶ್ರೀ ಅಣ್ಣಾರಾವ್ ವೀರಭದ್ರಪ್ಪ ಪಾಟೀಲ್

ವಿಧಾನ ಸಭಾ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಅಣ್ಣಾರಾವ್ ವೀರಭದ್ರಪ್ಪ ಪಾಟೀಲರವರು 1926 ರಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದದಲ್ಲಿ ಜನಿಸಿದರು.

ಶ್ರೀಯುತರು 1972-77 ರಲ್ಲಿ ಆಳಂದ ವಿಧಾನ ಸಭಾ ಕ್ಷೇತ್ರದಿಂದಲೂ ಹಾಗೂ 1964-70 ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಆಯ್ಕೆಯಾಗಿ ಜನಸೇವೆ ಮಾಡಿದ್ದರು. ಅದಕ್ಕಿಂತ ಮುಖ್ಯವಾಗಿ ಅವರು ಹೈದ್ರಾಬಾದ್- ಕರ್ನಾಟಕ ವಿಮೋಚನಾ ಚಳುವಳಿಯ ಯೋಧರಾಗಿ ಕಾರ್ಯನಿರ್ವಹಿಸಿದವರಾಗಿರುತ್ತಾರೆ.

ಶ್ರೀಯುತರು ಹಿಂದುಳಿದ ಜಿಲ್ಲೆಯಾದ ಗುಲ್ಬರ್ಗಾದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳ ಸ್ಥಾಪಿಕರಾಗಿ ಮಾಡಿರುವ ಕಾರ್ಯ ಸ್ಮರಣೀಯವಾಗಿರುವಂತಹುದು.

ಶ್ರೀಯುತರು ಹಳ್ಳಿಯಲ್ಲಿ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಪ್ರಾರಂಭದಲ್ಲಿ ಆಳಂದನಗರ ಪಾಲಿಕೆ ಸದಸ್ಯರಾಗಿ ಹಾಗೂ ತಾಲ್ಲೂಕು ಕಾಂಗ್ರೆಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 17ನೇ ಡಿಸೆಂಬರ್ 1998 ರಂದು ನಿಧನ ಹೊಂದಿರುತ್ತಾರೆ.

4. ಶ್ರೀ ಬಿ. ಪುಟ್ಟಸ್ವಾಮಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ. ಪುಟ್ಟಸ್ವಾಮಯ್ಯನವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನ ಬನ್ನಿಕುಪ್ಪೆಯಲ್ಲಿ ದಿನಾಂಕ 22ನೇ ನವೆಂಬರ 1920 ರಂದು ಜನಿಸಿದರು.

ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು ಸಹಕಾರ ರಂಗ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿ. ಅನೇಕ ಸಂಘ ಸಂಸ್ಥೆಗಳನ್ನು ರಾಮನಗರದಲ್ಲಿ ಸ್ಥಾಪಿಸಿ ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡುದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

1969 ರಲ್ಲಿ ರಾಮನಗರ ತಾಲ್ಲೂಕು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ದುಡಿದಿದ್ದಾರೆ. ಇವರು 5ನೇ ವಿಧಾನಸಭೆಗೆ ರಾಮನಗರ ಕ್ಷೇತ್ರದಿಂದ 1972-77 ರಲ್ಲಿ ಆಯ್ಕೆಯಾಗಿ ಜನಾನುರಾಗಿಗಳಾಗಿದ್ದರು. ಶ್ರೀಯುತರು ಸದನದ ನಡವಳಿಕೆಗಳಲ್ಲಿ ಭಾಗವಹಿಸಿ ನಗೆ ಪಟಾಕಿಗಳನ್ನ ಹಾರಿಸಿ, ಸದನವನ್ನು ನಗೆಗಡಲಿನಲ್ಲಿ ತೇಲಿಸುತ್ತಿದ್ದರು.

ಶ್ರೀಯುತರು ದಿನಾಂಕ 20ನೇ ಡಿಸೆಂಬರ್ 1998 ರಂದು ನಿಧನ ಹೊಂದಿರುತ್ತಾರೆ.

5. ಶ್ರೀ ವೀರಭದ್ರಪ್ಪ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ ವೀರಭದ್ರಪ್ಪನವರು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಮಲ್ಲಾಪುರದಲ್ಲಿ ದಿನಾಂಕ 14-12-1935 ರಂದು ಬಿನಕನಹಳ್ಳಿ ಗ್ರಾಮದಲ್ಲಿ ಜನಿಸಿದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಇವರು ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ವರ್ತಕರೂ ಆಗಿದ್ದರು.

ಶ್ರೀಯುತರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ 9ನೇ ವಿಧಾನ ಸಭೆಗೆ 1998 ರಲ್ಲಿ ಕಡೂರು ಕ್ಷೇತ್ರವನ್ನು ಪ್ರತಿನಿಧಿಸಿ ತಮ್ಮ ಕ್ಷೇತ್ರದಲ್ಲಿ ಹಲವಾರು ಜನೋಪಕಾರಿ ಸೇವೆ ಮಾಡಿ ಜನ ಮನ್ನಣೆಗಳಿಸಿದ್ದರು.

ಶ್ರೀಯುತರು ದಿನಾಂಕ: 18ನೇ ಜನವರಿ 1999ರಂದು ನಿಧನರಾಗಿರುತ್ತಾರೆ.

6. ಶ್ರೀ ಕಲ್ಯಾಣ ರಾವ್ ಎಂ. ಮರಗುತ್ತಿ

ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಕಲ್ಯಾಣರಾವ್ ಎಂ. ಮರಗುತ್ತಿ ಅವರು ಗುಲ್ಬರ್ಗಾ ತಾಲ್ಲೂಕು ಮರಗುತ್ತಿ ಗ್ರಾಮದಲ್ಲಿ ದಿನಾಂಕ : 17ನೇ ಆಗಸ್ಟ್ 1925 ರಲ್ಲಿ ಜನಿಸಿದರು. ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು.

ಶ್ರೀಯುತರು 1967-71ರ 4ನೇ ವಿಧಾನಸಭೆಯಲ್ಲಿ ಕಲ್ಗಿ ಕ್ಷೇತ್ರದಿಂದ ಪ್ರತಿನಿಧಿಸಿದ್ದರು. ಹಾಗೂ 1974-80ರ ಅವಧಿಗೆ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು.

ಶ್ರೀಯುತರು ಅಂದಿನ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕರ್ನಾಟಕ ಬಳಕೆದಾರರ ಸಹಕಾರ ಮಹಾ ಮಂಡಳಿಯ ಸ್ಥಾಪಕ ನಿರ್ವಾಹಕರಾಗಿದ್ದರು ಹಾಗೂ 1959ರಿಂದ 1969ರವರೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ : 22ನೇ ಫೆಬ್ರವರಿ 1999ರಂದು ನಿಧನರಾಗಿದ್ದಾರೆ.

7. ಶ್ರೀ ಎನ್. ತಮ್ಮಣ್ಣ

ವಿಧಾನಸಭಾ ಮಾಜಿ ಸದಸ್ಯರಾದ ಶ್ರೀ ಎನ್. ತಮ್ಮಣ್ಣ ಅವರು ದಿನಾಂಕ : 19ನೇ ಜನವರಿ 1946ರಲ್ಲಿ ಮಂಡ್ಯ ಜಿಲ್ಲೆಯ ಕರೆಗೋಡು ತಾಲ್ಲೂಕು, ಚನ್ನಗಲ್ಲು ಗ್ರಾಮದಲ್ಲಿ ಜನಿಸಿದರು.

ಶ್ರೀಯುತರು 1989 ರಿಂದ 1994 ರವರೆಗೆ 9ನೇ ವಿಧಾನಸಭಾ ಸದಸ್ಯರಾಗಿ ಕರೆಗೋಡು ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು ಬಿ.ಎ. ಪದವೀಧರರು, ವೃತ್ತಿಯಲ್ಲಿ ಕೃಷಿಕರು ಹಾಗೂ ಕೈಗಾರಿಕೋದ್ಯಮಿಯಾಗಿದ್ದರು. 15 ವರ್ಷಗಳ ಕಾಲ ಪಿ.ಸಿ.ಆರ್.ಡಿ. ಬ್ಯಾಂಕಿನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಗ್ರಾಮೀಣ ಅಭಿವೃದ್ಧಿಗೆ ಇವರಿಂದ ಸಂದಿರುವ ಸೇವೆ ಸ್ಮರಣೀಯವಾದುದು.

ಶ್ರೀಯುತರು ದಿನಾಂಕ : 27ನೇ ಫೆಬ್ರವರಿ 1999 ರಂದು ನಿಧನರಾಗಿರುತ್ತಾರೆ.

8. ವೈ.ಎನ್. ನಂಜುಂಡಪ್ಪ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೈ.ಎನ್. ನಂಜುಂಡಪ್ಪನವರು ಮೈಸೂರು ಜಿಲ್ಲೆಯ ಕೆ.ಆರ್. ನಗರದವರಾಗಿರುತ್ತಾರೆ.

ಶ್ರೀಯುತರು 1945-49ನೇ ಅವಧಿಯಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ಕೆ.ಆರ್. ನಗರದಲ್ಲಿ ಹಲವಾರು ಜನೋಪಯೋಗಿ ಕೆಲಸಗಳನ್ನು ಮಾಡಿರುತ್ತಾರೆ.

ಶ್ರೀಯುತರು ದಿನಾಂಕ: 30ನೇ ಡಿಸೆಂಬರ್ 1998ರಂದು ನಿಧನರಾಗಿರುತ್ತಾರೆ.

9. ಶ್ರೀ ಎನ್.ಸಿ. ಮಾಧುರಾಜು

ಕರ್ನಾಟಕ ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎನ್.ಸಿ. ಮಾಧುರಾಜು ಅವರು 1940ರಲ್ಲಿ ಬೆಂಗಳೂರು ನಗರದಲ್ಲಿ ಜನಿಸಿದರು. ಶ್ರೀಯುತರು ಬಿ.ಕಾಂ. ಪದವೀಧರರಾಗಿದ್ದರು.

ಶ್ರೀಯುತರು 1994ರ ಜೂನ್‌ನಲ್ಲಿ 1994-2000 ಅವಧಿಗೆ ಕರ್ನಾಟಕ ವಿಧಾನ ಸಭೆಯಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದರು, ಪೂರ್ವದಲ್ಲಿ ಅವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದುಡಿರುತ್ತಾರೆ.

ಶ್ರೀಯುತರು 1978-83ರವರೆಗೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಸಮಿತಿಯ ಅಧ್ಯಕ್ಷರಾಗಿ, ಪ್ರಸಿದ್ಧಿ ಸ್ಕೂಲ್ ಹಾಗೂ ಮಾಧುರಾಜು ಅನಾಥಾಶ್ರಮ ಟ್ರಸ್ಟಿನ ಅಧ್ಯಕ್ಷರಾಗಿ, ಶ್ರೀರಾಮ ಸಹಕಾರ ಸೊಸೈಟಿಯ ಕಾರ್ಯದರ್ಶಿಯಾಗಿ, ಹಾಗೂ ಕರ್ನಾಟಕ ಹಿಂದುಳಿದ ವರ್ಗದ ಸಂಘದ ಶಿಕ್ಷಣ ಸಂಸ್ಥೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು 1979 ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಹಿಂದುಳಿದ ವರ್ಗದ ಸೆಲ್‌ನ ಕಾರ್ಯದರ್ಶಿಯಾಗಿ ಹಾಗೂ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ಹಿಂದುಳಿದ ವರ್ಗ ಹಾಗೂ ದಲಿತರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದು ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಅಸಂಖ್ಯಾತ ವಿದ್ಯಾರ್ಥಿಗಳಿಗೆ ನೆರವಾಗಿದ್ದರು.

ಶ್ರೀಯುತರು ದಿನಾಂಕ : 13ನೇ ನವೆಂಬರ್ 1998ರಂದು ನಿಧನರಾಗಿರುತ್ತಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು.)

ಅಧ್ಯಕ್ಷರು :— ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತಠ ಕುಟುಂಬ ವರ್ಗಕ್ಕೆ ಕಳುಹಿಸಿಕೊಡಲಾಗುವುದು.

ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ನಿಲುವಳಿ ಸೂಚನೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಅಧ್ಯಕ್ಷರೆ, ತಾವು ಒಪ್ಪಿಗೆ ಕೊಡುವುದಾದರೆ ಪ್ರಶ್ನೋತ್ತರವನ್ನು ಮುಂದೂಡಿ. ನಾನು ತಮಗೆ ಈಗಾಗಲೇ ಕಳುಹಿಸಿಕೊಟ್ಟಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬಹುದು.ಈಗ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದೂಡಿ, ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡಲಾಗಿದೆ. ಆದ್ದರಿಂದ ಈ ವಿಷಯ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು :— ತಾವು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಂದು ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ಬಿ.ಎನ್. ಯಡಿಯೂರಪ್ಪ :— ತಾವೇ ತೀರ್ಮಾನ ತೆಗೆದುಕೊಳ್ಳಿ. ಯಾವುದಕ್ಕೆ ಆದ್ಯತೆ ಕೊಡಬೇಕು ಎಂಬುದನ್ನು ನೋಡಿ.

ಅಧ್ಯಕ್ಷಕರು :— ಎರಡಕ್ಕೂ ಆದ್ಯತೆ ಕೊಡೋಣ. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಬಹಳ ದಿವಸಗಳ ನಂತರ ಈ ಅಧಿವೇಶನ ಸೇರಿದೆ. ಸದಸ್ಯರ ಹಕ್ಕನ್ನು ರಕ್ಷಣೆ ಮಾಡಬೇಕಾಗಿದೆ. ತಾವೆಲ್ಲರೂ ಹಿರಿಯ ಸದಸ್ಯರು ಇರುವುದರಿಂದ ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇಡೀ ಪಂಚಾಯಿತಿಯ ವ್ಯವಸ್ಥೆ ನಿಂತು ಹೋಗಿದೆ. ವಿಕೇಂದಿರಕರಣ ಮಾಡುತ್ತೇವೆಂದು ಹೋಗಿ ಕೇಂದ್ರೀಕರಣ ಮಾಡುವಂಥ ಒಂದು ಕೆಲಸವನ್ನು ಮಾಡಿದ್ದಾರೆ.

ಅಧ್ಯಕ್ಷರು :— ಇವತ್ತು ತಮಗೆ ಅವಕಾಶ ಕೊಡುತ್ತೇನೆ. ತಾವು ನಂತರ ಮಾತನಾಡಬಹುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಸನ್ಮಾನ್ಯ ಅಧ್ಯಕ್ಷರೆ, ನನ್ನ ಹಿಂದಿನ ಅಧಿವೇಶನದ ಪ್ರಶ್ನೆಗಳಿಗೆ ಇನ್ನೂ ಕೂಡ ಉತ್ತರ ಬಂದಿರುವುದಿಲ್ಲ. ನನ್ನ 5-6